**ಅರಣ್ಯ ಇಲಾಖೆ**

**ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವೃತ್ತ, ಮೈಸೂರು**

ಸಂಖ್ಯೆ-ಎ2/ಸಿಬ್ಬಂದಿ/ಆ.ಕ/ನೇನೇ/ಸಿಆರ್-16/2022-23

ಅರಣ್ಯ ಭವನ, ಅಶೋಕಪುರಂ, ಮೈಸೂರು -570008
ಫ್ಯಾಕ್ಸ್ /ದೂರವಾಣಿ ಸಂಖ್ಯೆ-2480875

ದಿನಾಂಕ: 03-06-2023.

**: ಅಧಿಕೃತ ಜ್ಞಾಪನ ಪತ್ರ :**

ವಿಷಯ :- 2022-23ನೇ ಸಾಲಿನಲ್ಲಿ ಮೈಸೂರು ಅರಣ್ಯ ವೃತ್ತದಲ್ಲಿ ಖಾಲಿ ಇರುವ ಆನೆ ಕಾವಾಡಿಗ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು

ಉಲ್ಲೇಖ :-

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು,), ಬೆಂಗಳೂರು ರವರ ಕಛೇರಿ ಇ-ಆಫೀಸ್ ಪತ್ರ ಸಂಖ್ಯೆ-ಕೆ.ಎಫ್.ಡಿ/ಹೆಚ್.ಓ.ಎಫ್.ಎಫ್/ಬಿ9(ಆರ್.ಸಿ.ಟಿ)/11/2022-23 ಪಿ & ಆರ್ ದಿನಾಂಕ: 28-02-2023.
2. ಈ ಕಛೇರಿ ಅಧಿಸೂಚನೆ ಸಂಖ್ಯೆ: ಎ2/ಸಿಬ್ಬಂದಿ/ಆ.ಕ/ನೇನೇ/ಸಿಆರ್-16/2022-23 ದಿನಾಂಕ: 15-03-2023
3. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ : 11-04-2023.
4. ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪರಿವೀಕ್ಷಣಾಧಿಕಾರಿ ಆನೆ ಕಾವಾಡಿಗ ನೇರ ನೇಮಕಾತಿ ಪ್ರಕ್ರಿಯೆ ಪ್ರಾಧಿಕಾರ ಸಮಿತಿ, ವನ್ಯಜೀವಿ ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ : ಎ3/ಸಿಬ್ಬಂದಿ/ಆ.ಕಾ/ನೇನೇ/ಜಿವಿಎಲ್-146/2023-24/45 ದಿನಾಂಕ : 24-05-2023.
5. ಈ ಕಛೇರಿ ಅಧಿಸೂಚನೆ ಪತ್ರ ಸಮ ಸಂಖ್ಯೆ ದಿನಾಂಕ : 29-05-2023 (ತಾತ್ಕಾಲಿಕ ಆಯ್ಕೆ ಪಟ್ಟಿ)
6. ಶ್ರೀ ಗಣೇಶ, ಶ್ರೀ ಯೋಗೇಶ್ ಹೆಚ್.ಎಂ, ಶ್ರೀ ಜುಬೇರ್ ಷರೀಫ್, ಶ್ರೀ ಮಧುಸೂದನ್ ಬಿ.ಕೆ ಇವರಗಳ ಆಕ್ಷೇಪಣೆ ದಿನಾಂಕ : 30-05-2023
7. ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆನೆ ಕಾವಾಡಿ ಹುದ್ದೆಯ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ, ಮೈಸೂರು ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ದಿನಾಂಕ : 02-06-2023

******

**ಪ್ರಸ್ತಾವನೆ:-**

ಉಲ್ಲೇಖ (1) ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಪತ್ರದಲ್ಲಿ ಮೈಸೂರು ವೃತ್ತ ವ್ಯಾಪ್ತಿಗೆ ಹಂಚಿಕೆ ಮಾಡಲಾದ ಒಟ್ಟು 05 ಸಂಖ್ಯೆ ಆನೆ ಕಾವಾಡಿಗ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖ (2) ರ ಈ ಕಛೇರಿಯಿಂದ ಅಧಿಸೂಚನೆ ಹೊರಡಿಸಿ ಈ ಕೆಳಕಂಡ ಮೀಸಲಾತಿ ವರ್ಗೀಕರಣದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿದೆ.

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | ಒಟ್ಟು |
|---|---|---|---|---|---|---|---|
| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | |
| ಪರಿಶಿಷ್ಟ ಜಾತಿ | 1 | – | – | – | – | – | 1 |
| ಸಾಮಾನ್ಯ ಅರ್ಹತೆ | 1 | 1 | – | – | – | – | 2 |
| ಪರಿಶಿಷ್ಟ ಪಂಗಡ | 1 | – | – | – | – | – | 1 |
| ಪ್ರವರ್ಗ–I | 1 | – | – | – | – | – | 1 |
| ಒಟ್ಟು | 4 | 1 | – | – | – | – | 5 |

ತದನಂತರ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಉಲ್ಲೇಖ (3) ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ರವರ ನೇತೃತ್ವದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿಗಳನ್ನೊಳಗೊಂಡಂತೆ ಆಯ್ಕೆ ಪ್ರಕ್ರಿಯೆ ಪ್ರಾಧಿಕಾರ ಸಮಿತಿಯನ್ನು ರಚಿಸಲಾಗಿದ್ದು, ಅದರಂತೆ ದಿನಾಂಕ: 16–05–2023 ಮತ್ತು 17–05–2023 ರಂದು ಅರ್ಹ ಅಭ್ಯರ್ಥಿಗಳಿಗೆ ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನ ನಡೆಸಲಾಗಿರುತ್ತದೆ.

ಮೇಲಿನಂತೆ ನಿಗದಿತ ದಿನಾಂಕಗಳಂದು ಸದರಿ ಸಂದರ್ಶನಕ್ಕೆ ಒಟ್ಟು 35 ಸಂಖ್ಯೆ ಅಭ್ಯರ್ಥಿಗಳು ಹಾಜರಾಗಿದ್ದು, ಅದರಲ್ಲಿ 20 ಸಂಖ್ಯೆ ಅಭ್ಯರ್ಥಿಗಳನ್ನು ದಾಖಲಾತಿಗಳ ಆಧಾರದ ಮೇಲೆ ತಿರಸ್ಕರಿಸಲಾಗಿರುತ್ತದೆ. 15 ಸಂಖ್ಯೆ ಅಭ್ಯರ್ಥಿಗಳು ದೈಹಿಕ ಸಾಮರ್ಥ್ಯ ಹಾಗೂ ಆನೆ ನಿರ್ವಹಣೆ ಪರೀಕ್ಷೆಯಲ್ಲಿ ಭಾಗವಹಿಸಿದ್ದು, ಅವರಲ್ಲಿ ದೈಹಿಕ ಸಾಮರ್ಥ್ಯ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಗಳಿಗನುಗುಣವಾಗಿ (ಕರ್ನಾಟಕ ರಾಜ್ಯವ್ಯಾಪ್ತಿಯ ಅಧಿಸೂಚಿತ ಅರಣ್ಯ ಪ್ರದೇಶದೊಳಗೆ ವಾಸವಾಗಿರುವ ಮತ್ತು ಆನೆ ನಿರ್ವಹಣೆ ಅನುಭವದ ಬಗ್ಗೆ) ಆಯ್ಕೆ ಸಮಿತಿಯು ನೀಡಿದ ಗರಿಷ್ಠ ಅಂಕಗಳ ಅನುಸಾರ ಮತ್ತು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರ ಅನುಸಾರ ಇತರೆ ಅಭ್ಯರ್ಥಿಗಳಿಗೆ ಇರುವ ಗರಿಷ್ಠ ವಯೋಮಿತಿ ಒಳಗಿದ್ದ (ಮೀಸಲಾತಿ, ವರ್ಗೀಕರಣ ಆಧಾರದ ಮೇಲೆ) ಈ ಕೆಳಕಾಣಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆ ಸಮಿತಿಯ ವರದಿಯ ಆಧಾರದ ಮೇರೆಗೆ ಅಂತಿಮವಾಗಿ ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಉಲ್ಲೇಖ (5) ರ ದಿನಾಂಕದಂದು ಹೊರಡಿಸಿ ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 31–05–2023 ರ ಸಂಜೆ: 5.30 ರೊಳಗಾಗಿ **ಲಿಖಿತ ರೂಪದಲ್ಲಿ** ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು. ತಾತ್ಕಾಲಿಕ ಆಯ್ಕೆ ಪಟ್ಟಿ ವಿವರ ಈ ಕೆಳಗಿನಂತಿದೆ.

**<u>ಆನೆ ಕಾವಾಡಿಗ ಹುದ್ದೆಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ</u>**

| ಕ್ರ.ಸಂ | ಅರ್ಜಿ ಸಂಖ್ಯೆ | ಹೆಸರು (ಶ್ರೀ/ಶ್ರೀಮತಿ) | ಪ್ರವರ್ಗ | ಜನ್ಮ ದಿನಾಂಕ | ಪುರುಷ/ ಮಹಿಳೆ | ಒಟ್ಟು ಅಂಕ 100 |
|---|---|---|---|---|---|---|
| 01 | 05 | ವಿನೋದ್ ರಾಜ್ | ಸಾಮಾನ್ಯ ಅರ್ಹತೆ | 01–01–1988 | ಪುರುಷ | 91.7 |
| 02 | 180 | ಜೀವನ್ ಜಿ.ವಿ | ಪರಿಶಿಷ್ಟ ಪಂಗಡ | 27–11–2003 | ಪುರುಷ | 91.0 |

| | | | | | | |
|---|---|---|---|---|---|---|
| 03 | 326 | ಮಂಜುನಾಥ್ ಹೆಚ್.ಸಿ | ಪರಿಶಿಷ್ಟ ಜಾತಿ | 06–04–1994 | ಪುರುಷ | 71.5 |
| 04 | 85 | ನಂದಿನಿ ಜೆ.ಪಿ | ಸಾಮಾನ್ಯ ಅರ್ಹತೆ | 22–05–1988 | ಮಹಿಳೆ | 57.0 |
| 05 | | | ಪ್ರವರ್ಗ–1 | ಯಾವ ಅಭ್ಯರ್ಥಿಯು ಆಯ್ಕೆಗೊಂಡಿರುವುದಿಲ್ಲ. | | |

ಮೇಲಿನಂತೆ ಹೊರಡಿಸಲಾದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಕ್ರ.ಸಂ 1 ಶ್ರೀ ವಿನೋದ್‌ರಾಜ್, ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಇವರು ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನದಲ್ಲಿ ಇತರೆ ಅಭ್ಯರ್ಥಿಗಳಿಂತ ಗರಿಷ್ಠ ಅಂಕ ಪಡೆದಿರುವುದರಿಂದ ಮೆರಿಟ್ ಆಧಾರದಲ್ಲಿ ಸಾಮಾನ್ಯ ಅರ್ಹತಾ ಅಭ್ಯರ್ಥಿ ಎಂದು ಪರಿಗಣಿಸಲಾಗಿತ್ತು. ಆದರೆ, ಆನೆಕಾವಾಡಿಗ ಹುದ್ದೆಗೆ ಅರ್ಜಿ ಸಲ್ಲಿಸಿದ್ದವರ ಪೈಕಿ ಉಲ್ಲೇಖ (6) ರಲ್ಲಿನ 4 ಅರ್ಜಿದಾರರು ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನದ ವೇಳೆ ಉತ್ತೀರ್ಣರಾಗಿರುವ ಬಗ್ಗೆ ಹಾಗೂ ಸದರಿ ದಿನವೇ ಮೂಲ ದಾಖಲಾತಿಗಳನ್ನು ಸಲ್ಲಿಸಿರುವ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಆಕ್ಷೇಪಣೆಗಳನ್ನು ಉಲ್ಲೇಖ (7) ರ ದಿನಾಂಕದಂದು ಆಯ್ಕೆ ಪ್ರಕ್ರಿಯೆ ಪ್ರಾಧಿಕಾರ ಸಮಿತಿಯೊಂದಿಗೆ ಮತ್ತೊಮ್ಮೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲಾತಿ ಹಾಗೂ ಅಂಕಪಟ್ಟಿಗಳನ್ನು ಪರಾಮರ್ಶಿಸಿದಾಗ ಶ್ರೀ ವಿನೋದ್‌ರಾಜ್ ಇವರು ಈ ಕಛೇರಿ ಅಧಿಸೂಚನೆಯಲ್ಲಿ ಹೊರಡಿಸಿದಂತೆ ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸವಾಗಿರುವುದಕ್ಕೆ ಹಕ್ಕು ಪತ್ರವನ್ನು ಮಾತ್ರ ಸಲ್ಲಿಸಿದ್ದು, ತಹಶೀಲ್ದಾರ್ ರವರಿಂದ ಪಡೆದಿರುವ ಪ್ರಮಾಣ ಪತ್ರದಲ್ಲಿ ದಿನಾಂಕ : 20–05–2023 ಎಂದು ನಮೂದಾಗಿರುವುದರಿಂದ ಸಭೆಯಲ್ಲಿದ್ದ ಎಲ್ಲಾ ಸದಸ್ಯರೊಂದಿಗೆ ಚರ್ಚಿಸಿ ಕೈಗೊಂಡ ತೀರ್ಮಾನದಂತೆ ಸದರಿ ಅಭ್ಯರ್ಥಿಯನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈಬಿಟ್ಟು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು–1977 ರನ್ವಯ, ಅರ್ಹ ಅಭ್ಯರ್ಥಿಗಳಿಗೆ ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನದಲ್ಲಿ ಪಡೆದಿರುವ ಅಂಕಗಳಿಗೆ ಅನುಸಾರವಾಗಿ ಹಾಗೂ ಮೀಸಲಾತಿ ವರ್ಗೀಕರಣದಡಿಯಲ್ಲಿ ಈ ಕೆಳಕಂಡ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## : ಆದೇಶ :

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಹಾಗೂ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು–1977 ರನ್ವಯ, ಅರ್ಹ ಅಭ್ಯರ್ಥಿಗಳಿಗೆ ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನದಲ್ಲಿ ಪಡೆದಿರುವ ಅಂಕಗಳಿಗೆ ಅನುಸಾರವಾಗಿ ಹಾಗೂ ಮೀಸಲಾತಿ ವರ್ಗೀಕರಣದಡಿಯಲ್ಲಿ ಈ ಕೆಳಕಂಡಂತೆ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

**ಆನೆ ಕಾವಾಡಿಗ ಹುದ್ದೆಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ**

| ಕ್ರ.ಸಂ | ಅರ್ಜಿ ಸಂಖ್ಯೆ | ಹೆಸರು (ಶ್ರೀ/ಶ್ರೀಮತಿ) | ಪ್ರವರ್ಗ | ಜನ್ಮ ದಿನಾಂಕ | ಪುರುಷ/ ಮಹಿಳೆ | ಒಟ್ಟು ಅಂಕ 100 |
|---|---|---|---|---|---|---|
| 01 | 180 | ಜೀವನ್ ಜಿ.ವಿ | ಸಾಮಾನ್ಯ ಅರ್ಹತೆ (ಇತರೆ) | 27–11–2003 | ಪುರುಷ | 91.0 |

| | | | | | | |
|---|---|---|---|---|---|---|
| 02 | 75 | ಗಣೇಶ್ | ಪರಿಶಿಷ್ಟ ಪಂಗಡ (ಇತರೆ) | 01-01-1987 | ಪುರುಷ | 87.1 |
| 03 | 326 | ಮಂಜುನಾಥ ಹೆಚ್.ಸಿ | ಪರಿಶಿಷ್ಟ ಜಾತಿ (ಇತರೆ) | 04-06-1994 | ಪುರುಷ | 71.5 |
| 04 | 85 | ನಂದಿನಿ ಜೆ.ಪಿ | ಸಾಮಾನ್ಯ ಅರ್ಹತೆ (ಮಹಿಳಾ ಅಭ್ಯರ್ಥಿ) | 22-05-1988 | ಮಹಿಳೆ | 57.0 |
| 05 | | | ಪ್ರವರ್ಗ-1 | ಯಾವ ಅಭ್ಯರ್ಥಿಯು ಆಯ್ಕೆಗೊಂಡಿರುವುದಿಲ್ಲ. | | |

ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆನೆ ಕಾವಾಡಿ ಹುದ್ದೆಯ ನೇರ
ನೇಮಕಾತಿ ಆಯ್ಕೆ ಪ್ರಾಧಿಕಾರ,
ಮೈಸೂರು ವೃತ್ತ, ಮೈಸೂರು.

ಪ್ರತಿಯನ್ನು :-

1. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಿಬ್ಬಂದಿ ಮತ್ತು ನೇಮಕಾತಿ) ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು ರವರಿಗೆ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪರಿವೀಕ್ಷಣಾಧಿಕಾರಿ, ಆನೆ ಕಾವಾಡಿಗಳ ನೇರ ನೇಮಕಾತಿ ಪ್ರಕ್ರಿಯೆ ಪ್ರಾಧಿಕಾರ ಸಮಿತಿ, ವನ್ಯಜೀವಿ ವಿಭಾಗ, ಮೈಸೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಪ್ರತಿ.